ಮೈಸೂರ ಗೆಜಿಟ.

ನಂ. 51 ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು. ಸನ್ 1889.

ಬೆಂಗಳೂರು, ಶನಿವಾರ, ಡಿಸಂಬರ್ ತಾ|| 21, ಸನ್ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟಿಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕಿಸ್ ಆಫಿಸರಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಜೋಡ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜಿರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್ಟಿಂಡೆಂಟರು, ಫಾರೆಸ್ಟ್ ಆಫಿಸರಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟ್ಸಗಳು ವ ರೆಗ್ಯುಲೇಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 26ನೇ ನವಂಬರ್ 1889.

ನಂ. 246.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಿಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬಿಳಿಗ್ಯೆ 11 ಘಂಟೆಗೆ ಹರಾಜು ಮುರುವಾಗಿ ಉಳಿಕೆ ಯಾವದೂ ಇಲ್ಲದ ಗ್ರಾಮವು ಜಡ ದರಖಾಸ್ತುದಾರರಿಗೆ ಹರಾಜೆ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಜ್ಞಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಯಿಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಿಗಳೊಳಗಾಗಿ ಪಾವತಿ ಮಾಡದೆ ಅದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಆಥವಾ ಬಾಕಿ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರಾ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಪಡಿಸತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂಡಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಆಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಹಶೀಲ್ದಾರ್ಗಳಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತ್ತಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರುತ್ತಾರೆ, ಅಂಥಾ ಅಪ್ಪೀಲ್ನಲ್ಲಿ ಆಗುವ ಆಜ್ಞೆರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಪಾಜಿಟ್ ಮೊಬಲಗನ್ನು ಕೊಟ್ಟವರ ಹೆಸರು.	ತಾಲ್ಲೂಕಿನ ಹೆಸರು.	ಗ್ರಾಮ.	ಕಾಯಂಗುತ್ತಿದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಪುಟ್ಟುವಳಿ ಯಾ ಬೇರಿಜ.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕೋಲಾರ	ಕೋಲಾರ	ನಳಿಸನೂರು	ಜಯಸಂದ್ರ ಜೋಡೀ ಗ್ರಾಮ	ಕೋದಂಡ ರಾಮಯ್ಯ ಸೋಮನಾಂದರರಾವ ವಗ್ಗೈರೆ	ಖಂ. ಕೊ. ಪ ರೂ. ಆ. ಪೈ. 12 16 4	ರೂ. ಆ. ಪೈ. 29 0 0	ರೂ. ಆ. ಪೈ. 29 6 5	ರೂ. ಆ. ಪೈ. 326 7 3 ಮತ್ತು ಬಡ್ಡಿ ಸಹ	ಸ್ರ 1890ನೇ ಇಸವಿ ಜನವರೀ ತಾರೀಖು 8ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರು ರೂಬರೂ.

ಸರಾ.—ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಆಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 26ನೇ ನವಂಬರ್ 1889.

ನಂ. 247.—ಸಕಲ ಜನಗಳಿಗೂ ತಿಳಿಯುವಬ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಿಗೆದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಿ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಪರಿಪೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಬ್ಸ್ಕ್ರೈಬ್ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಪರಿಪೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೀಪಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅನ್ವಲ್ಕ್ರಯದಾರನ ಖರ್ಚಿನಲ್ಲಿ ಪ ನುಕ್ಯಾನಾಗಿ ಮರಳಿ ಹರಾಜು ಮಾಡಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಖ್ತಾರೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುಖ್ತಾರೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಬೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪ್ಯಾನತಿ ಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮನ್ಸೂಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜಿ ವಾಯಮಾದ್ಯಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್ಸಬ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿಯತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಜ್ಞೆರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುರಕಾರಕ್ಕೆ ಕೊಟ್ಟುವಳೇ ಯಾಜಪೇಕಾದ ಕ್ವಿಟೆರೆಂಟ್.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕೋಲಾರ.	ಕೋಲಾರ.	ಪೆಮಗಲ್ಲು.	ಲಿಂಗಾಪುರ ಕಾಯಂಗುತ್ತಾ ಗ್ರಾಮ	ಕೋದಂಡರಾಮಯ್ಯ	ಖಂ. ಕೊ. ಪ. 10 11 0	ರೂ. ಆ. ಪೈ. 48 0 0	ರೂ. ಆ. ಪೈ. 55 6 0 ಕಾಯಂಗುತ್ತಾ ಲೋಕಲ್‌ಸೆಸ್	ರೂ. ಆ. ಪೈ. 171 6 8 ಮತ್ತು ಬಡ್ಡೀ ಸಹ	1890ನೇ ಇಸವಿ ಜನವರೀ ತಾರೀಖು 9ರಲ್ಲು ತಾಲ್ಲೂಕ ಕಛೇರಿಯಲ್ಲಿ ಅಮಲ್ದಾರ್ರ ರೂಬರೂ.

ಪರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟತವಾಂ ಹಿಡುವಳಿಗಳಿಗೂ ದೇಣಿಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರಿ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 5ನೇ ಡಿಸಂಬರ್ 1889.

ನಂ. 256.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಪ್ಪೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಿಗದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಪ್ಪೆಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಮುಕ್ತಾಯವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಜೇರೆಜೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಚ್ಛಾನುಸಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಜೇರೆಜೇರೆ ದಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕಿಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀ ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಪಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಿಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಪಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜಿ ಮುವ್ಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಪೆಪ್ಯೆಟ್ ಕಮ್ಮಿಷನರವರಿಂದ ರುಜು ಮೊಹರ್ ಮಾಹೋಣಾದ ಬಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಇರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಪೇರೀಜ್.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿ ಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕೋಲಾರ	ಕೋಲಾರ ದಕ್ಷಿಣ	ನೈಲಸಂದ್ರ ಕಾಯಂ ಗುತ್ತಾಗಿ	ಕೃಷ್ಣರಾವ್, ಸುಬ್ಬರಾವ್, ರಾಮರಾವ್ ಮತ್ತು ಗುರುರಾವ್	ಖಂ. ಕೊ. ಪ. 45 .6 8	ರೂ. ಆ. ಪೈ. 148 1 2	ರೂ. ಆ. ಪೈ. 97 6 5	ರೂ. ಆ. ಪೈ. 228 1 7 ಮೆತ್ತು ಬಡ್ಡಿ ಸಹ	ಸ್ಃ 1890ನೇ ಇ ಸವಿ ಜನವರೀ ತಾ|| 17ರಲ್ಲುಕೋಲಾರ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರು ರೂಬರೂ.

ಷರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ, ಉಂಟುಮಾಡಲ್ಪಟ್ಟು ತಮಾಂ ಹಿಡುವಳಿಗಳಿಗೂ, ದೇಣಿಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 7ನೇ ಡಿಶಂಬರ್ 1889.

ನಂ. 259.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಮೈಸೂರು ಸರ್ಕಾರದವರು, ದಾವಣಗೆರೆ, ಹೊಳಲಕೆರೆ, ಅರಸೀಕೆರೆ ವ ತಿಪಟೂರು ಈ ತಾಲ್ಲೂಕುಗಳ ಅಮಲ್ದಾರ ವ ಸಬ್ಮಾರ್ಜಿನೇಟ್ ಮಾಜಿಸ್ಟ್ರೇಟುಗಳನ್ನ, 1889ನೇ ಇಸವಿ ಸೆಪ್ಟಂಬರ್ 11ನೇ ಮಕ್ಕುಂ 172ನೇ ನಂಬರ್ ಇಸ್ತಿಹಾರಿನ ದೆಸೆಯಿಂದ ಯೇರ್ಪಡಿಸಲ್ಪಟ್ಟಂತೆ ಕಡೂರು ಡಿಸ್ಟ್ರಿಕ್ಟಿನ ಸರಹದ್ದಿನೊಳಗೆ ಸಬ್ಜೂರ್ಡಿನೇಟ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಿರುತ್ತಾರೆಯಾಗಿ ಸದರೀ ಯಾವನು, ತಮ್ಮತಮ್ಮ ತಾಲ್ಲೂಕುಗಳೊಳಗೆ ಹಾಲಿ ಇರುವ ಅಧಿಕಾರ ಸರಹದ್ದಿಗಿಂತಲೂ ಜಾಸ್ತಿಯಾಗಿ ಈ ಕೆಳಗೆ ಕಂಡಂತೆ ಅವರವರ ಹೆಸರಿಗೆ ಬಾಜೂದಲ್ಲಿ ನಮೂದಿಸಲ್ಪಟ್ಟಿರುವ ಸ್ಥಳ ಸರಹದ್ದುಗಳೊಳಗೆ ಅವರವರಿಗೆ ಯಿರುವ ಯೆಲ್ಲ ಅಧಿಕಾರಗಳನ್ನೂ ನಡಿಸತಕ್ಕದ್ದು.

ದುವಣಗೆರೆ ಅಮಲ್ದಾರ್ ವ ಸಬಾರ್ಡಿನೇಟ್ ಮಾಜಿಸ್ಟ್ರೇಟ್	ದುವಣಗೆರೆ ತಾಲ್ಲೂಕಿಗೆ ವಳಿತವಾಗಿ ಮೈಸೂರ್ ಸ್ಟೇಟ್‌ರೈಲ್‌ವೇಗೆ ಕೇರಿದ 1889ನೇ ಇಸವಿ ಸೆಪ್ಟಂಬರ್ 11ನೇ ಮರ್ತುಂ 172ನೇ ನಂಬರ್ ಇಸ್ತಿಹಾರಿನಿಂದ ಕಡೂರು ಡಿಸ್ಟ್ರಿಕ್ಟಿಗೆ ವರ್ಗವಾಗಿರುವ ಜಮೀನುಗಳು.
ಹೊಳಲಕೆರೆ ಅಮಲ್ದಾರ್ ವ ಸಬಾರ್ಡಿನೇಟ್ ಮಾಜಿಸ್ಟ್ರೇಟ್	ಹೊಳಲಕೆರೆ ತಾಲ್ಲೂಕಿಗೆ ವಳಿತವಾಗಿ ಮೈಸೂರ್ ಸ್ಟೇಟ್ ರೈಲ್‌ವೇಗೆ ಕೇರಿದ 1889ನೇ ಇಸವಿ ಸೆಪ್ಟಂಬರ್ 11ನೇ ಮರ್ತುಂ 172ನೇ ನಂಬರ್ ಇಸ್ತಿಹಾರಿನಿಂದ ಕಡೂರು ಡಿಸ್ಟ್ರಿಕ್ಟಿಗೆ ವರ್ಗವಾಗಿರುವ ಜಮೀನುಗಳು.
ಅರಸೀಕೆರೆ ಅಮಲ್ದಾರ್ ವ ಸಬಾರ್ಡಿನೇಟ್ ಮಾಜಿಸ್ಟ್ರೇಟ್	ಅರಸೀಕೆರೆ ತಾಲ್ಲೂಕಿಗೆ ವಳಿತವಾಗಿ ಮೈಸೂರ್ ಸ್ಟೇಟ್ ರೈಲ್‌ವೇಗೆ ಕೇರಿದ 1889ನೇ ಇಸವಿ ಸೆಪ್ಟಂಬರ್ 11ನೇ ಮರ್ತುಂ 172ನೇ ನಂಬರ್ ಇಸ್ತಿಹಾರಿನಿಂದ ಕಡೂರು ಡಿಸ್ಟ್ರಿಕ್ಟಿಗೆ ವರ್ಗವಾಗಿರುವ ಜಮೀನುಗಳು.
ತಿಪಟೂರು ಅಮಲ್ದಾರ್ ವ ಸಬಾರ್ಡಿನೇಟ್ ಮಾಜಿಸ್ಟ್ರೇಟ್	ತಿಪಟೂರು ತಾಲ್ಲೂಕಿಗೆ ವಳಿತವಾಗಿ ಮೈಸೂರ್ ಸ್ಟೇಟ್ ರೈಲ್‌ವೇಗೆ ಕೇರಿದ 1889ನೇ ಇಸವಿ ಸೆಪ್ಟಂಬರ್ 11ನೇ ಮರ್ತುಂ172ನೇ ನಂಬರ್ ಇಸ್ತಿಹಾರಿನಿಂದ ಕಡೂರು ಡಿಸ್ಟ್ರಿಕ್ಟಿಗೆ ವರ್ಗವಾಗಿರುವ ಜಮೀನುಗಳು.

ತಾರೀಖು 6ನೇ ಡಿಸಂಬರ್ 1889.

ನಂ. 261.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕ್ರಿಸ್‌ಮಸ್ ರಜಾ ಉದ್ದಿಶ್ಯ ಮೈಸೂರು ಸಂಸ್ಥಾನದಲ್ಲಿರುವ ದರೋಬಸ್ತು ಪಬ್ಲಿಕ್ ಆಫಿಸುಗಳೂ ಸ್ಯ॥ 1889ನೇ ಇಸವಿ ಡಿಸಂಬರ್ 23ನೇ ತಾರೀಖು ಸೋಮವಾರದ ಲಾಗಾಯತು, 1890ನೇ ಇಸವಿ ಜನವರೀ 4ನೇ ತಾರೀಖು ಶನಿವಾರದ ವರಿವಿಗೂ ಟರಬಾಪ್ತ್ರ ಮಾಡಲ್ಪಡತಕ್ಕದ್ದು.

ಸದರೀ ರಜೂದಿವಸಗಳಲ್ಲಿ ಜರೂರಿಯಾತ್ ಕೆಲಸಗಳು ನಡಿಯತಕ್ಕ ಬ್ಯೆ ಆಯಾಯ ಇಲಾಖೆಯ ಮೊಖ್ತೇಸರರು ತಕ್ಕ ಏರ್ಪಾಡು ಮಾಡತಕ್ಕದ್ದು.

ಈ ಇಸ್ತಿಹಾರ್ ತಾಲ್ಲೂಕ್ ಜಾತ್ ಇಲಾಖೆಗಳಿಗೂ ಜಮಾಬಂದೀ ಮಾಡತಕ್ಕ ಇಲಾಖೆಗಳಿಗೂ ಲಗಾವಾಗುವದಿಲ್ಲ.

ತಾರೀಖು 7ನೇ ಡಿಸಂಬರ್ 1889.

ನಂ. 260.—ಮೆ॥ ಡಬ್ಲಿಯು ಜೇ. ಲಿಂಕ್ಕಯವರು ಕಡೂರು ಡಿಸ್ಟ್ರಿಕ್ಟ್ ಸಿವಲ್ ಸರ್ಜನ್ ಆಫಿಸಿನ ಚಾರ್ಜನ್ನು ಮೆ॥ ಡಿ. ಎ. ಟೋಕ್ಸೀಯವರಿಗೆ 1889ನೇ ಇಸವಿ ನವಂಬರ್ 23ನೇ ತಾರೀಖಿನ ಪೂರ್ವಾಹ್ಣದಲ್ಲಿ ಒಪ್ಪಿಸಿರುತ್ತಾರೆ.

ತಾರೀಖು 9ನೇ ಡಿಸಂಬರ್ 1889.

ನಂ. 262.—ಮೆ॥ ತಿ. ರಾಘವೇಂದ್ರರಾಯರು ಕಡೂರು ಡಿಸ್ಟ್ರಿಕ್ಟ್ ವ ಖಜಾನೆ ಚಾರ್ಜನ್ನು, 1889ನೇ ಇಸವಿ ಡಿಸಂಬರ್ 4ನೇ ತಾರೀಖಿನ ಮಧ್ಯಾಹ್ನಾತ್ಪರ ಕರ್ನಲ್ ಜೆ. ಎ. ಕ್ಯಾಂಬಲ್‌ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 10ನೇ ಡಿಸಂಬರ್ 1889.

ನಂ. 263.—ಇದರಿಂದ ನಮೂದಾಗುವ ಮುನಸಿಫರುಗಳ ವರ್ಗಾವರ್ಗಿಗಳ ಹುಕುಂ ಮಾಡೋಣಾಗಿರುತ್ತದೆ.—

ಸಿ. ಸುಬ್ಬರಾಯರಿಗೆ ಹೊಳೇನರಸೀಪುರದಿಂದ ಹೊನ್ನಾಳಿಗೆ ವರ್ಗ.
ತ್ರೀನಿವಾಸ ರಾಯರಿಗೆ ಹೊನ್ನಾಳಿಯಿಂದ ಹೊಳೇನರಸೀಪುರಕ್ಕೆ ವರ್ಗ.

ನಂ. 264.—ಸಿವಿಲ್ ಲೀವ್ ಕೋಡಿನ 73ನೇ ಸೆಕ್ಷನ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಚಿಕ್ಕ ಬಳ್ಳಾಪುರದ ಮುನಸಿಫ್ ಈ. ಸಿ. ತಿವಜ್ಞಾನಂ ಪಿಳ್ಳೈಯವರಿಗೆ, 1889ನೇ ಇಸವಿ ನವಂಬರ್ 4ನೇ ತಾರೀಖು ಲಾಗಾಯತು ಅರ್ಧ ತಲಬಿನ ಮೇಲೆ ಬಂದು ತಿಂಗಳೂ ಹದಿನೈದು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಿವಜ್ಞಾನಂಪಿಳ್ಳೈಯವರು ರಜಾದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ ಮೈಸೂರು ಡಿಸ್ಟ್ರಿಕ್ಟ ಜಡ್ಜಿ ಕೋರ್ಟಿನ ಶಿರಸ್ತೆದಾರ್ ಲಕ್ಷ್ಮೀನಾರಾಣಪ್ಪನವರು ಚಿಕ್ಕ ಬಳ್ಳಾಪುರದ ಮುನಸಿಫ್ ಕೆಲಸವನ್ನ ಆಕ್ಟಿಂಗ್ ತರೀಕು ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತಾರೆ.

ನಂ. 265.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 133ನೇ ಸೆಕ್ಷನ್ ಅನುಸರಿಸಿ, ಮೈಸೂರು ಟವ್ನ್ ಮಾಜಿಸ್ಟ್ರೇಟರಾದ ಮೆ॥ ಬಿ. ತಿರುಮಲಾಚಾರ್ಯರವರು ಸ್ಥಳ ಹೇಸಿಗೆಗಳ ವಿಷಯದಲ್ಲಿ ಹುಕ್ಕುಂ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 266.—ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರ ವ ಮಾಜಿಸ್ಟ್ರೇಟ್ ಮೆ|| ಸಿ. ಮಾದಯ್ಯನವರು ಅದರಡಿ ನಮೂದಾಗುವ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

1.—ಯರಡನೇ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್‌ಗಳು ವಿಧಿಸಿದ ಸಜಾಗಳ ಮೇಲೆ ಅಪ್ಪೀಲ್ ಹಿಡಿಯಲಿಕ್ಕೆ ಅಧಿಕಾರ (ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ಸೆಕ್ಷನ್ 407.)

2.—ರಿಕಾರ್ಡುಗಳನ್ನ ತರಿಸಿಕೊಳ್ಳಲಿಕ್ಕೆ ಅಧಿಕಾರ (ಕ್ರಿ|| ಪ್ರೊ|| ಕೋಡಿನ ಸೆಕ್ಷನ್ 435.)

ನಂ. 267.—ತುಮಕೂರ್ ಡಿಸ್ಟ್ರಿಕ್ಟ್ ಗುಬ್ಬೀ ತಾಲ್ಲೂಕು ಅಮಲ್‌ದಾರ್ ಕಂಠೀರಮಾಚಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಬಂದು ವಾರದ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 21ನೇ ಡಿಶಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಿಟರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಆಂಡರ್ ಸೆಕ್ರಿಟರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಹುಕುಂ ಬಮೋಜಿಬ್,
ಸಿ. ಮಾದಯ್ಯ,
ಫಾರ್ ಚೀಫ್ ಸೆಕ್ರಿಟರಿ.

ದಿವಾನರವರು, ಅವರ ಭೇಟಿ ಮಾಡಲಿಚ್ಛೆಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೇ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡ ಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಕೆ. ರೊರಸಾಮಿಅಯ್ಯರ್,
ಪ್ರೈವೆಟ್ ಸೆಕ್ರಿಟರಿ.

ವಿದ್ಯಾಭ್ಯಾಸದ ಇಲಾಖೆ.

ತಾರೀಖು 10ನೇ ಡಿಸಂಬರ್ 1890.

ಮೈಸೂರು ದೇಶೀಯ ಪರೀಕ್ಷೆ.

ಸ್ ೧೮೯೦ನೇ ಇಸವಿಯ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಉತ್ತರ ಸರ್ಕಲ್ ಸ್ಕೂಲ್‌ಗಳ ವಿದ್ಯಾರ್ಥಿಗಳ ಪೈಕಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವ ವಿದ್ಯಾರ್ಥಿಗೆ, ಕಬ್ಬಾಳಛಿಕಲ್ಪದ್ರುಮವೆಂಬ ಬಂದು, ಸಂಸ್ಕೃತ ಕನ್ನಡ ನಿಘಂಟು, ತುಂಕೂರು ತಾಲ್ಲೂಕು ಗವರ್ನಮೆಂಟ್ ಕನ್ನಡ ಸ್ಕೂಲ್ ಹೆಡ್ ದಾಸ್ಟರಾದ ಮು|| ರಾ|| ಕೆ. ರಾಮಸ್ವಾಮಯ್ಯಂಗಾರ್ರವರಿಂದ ಬಹುಮಾನವಾಗಿ ಕೊಡಲ್ಪಡುವದು.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಿಟರಿ.